# ಸಮಾಜಕ್ಕೆ ಮಾದರಿಯಾದ ಮಂಜುಳಾ ಮಾದರ

**ಬೆಳಗಾವಿ** ಜಿಲ್ಲೆ ಗೋಕಾಕ ತಾಲ್ಲೂಕಿನ ಅರಬಾಂವಿಯ ಮಂಜುಳಾ ಮಾದರ ಅವರು 6ನೇ ವಯಸ್ಸಿಗೇ ಅಮ್ಮನ ಒತ್ತಾಸೆಗೆ ಹಸೆಮಣೆ ಏರಿದವರು. ತನ್ನಂತೆ ತನ್ನ ಮಗಳನ್ನೂ ದೇವದಾಸಿ ಪದ್ಧತಿಗೆ ನೂಕಿಬಿಟ್ಟಾರು ಎಂಬ ದುಗುಡ ಮಂಜುಳಾ ಅವರ ತಾಯಿಯದಾಗಿತ್ತು. ಹೀಗಾಗಿ ಬಲು ಬೇಗನೆ ಮದುವೆ ಮಾಡಿದ್ದರು.

6ನೇ ವಯಸ್ಸಿನಲ್ಲಿಯೇ ತಾಳಿಗೆ ತನ್ನ ಕೊರಳೊಡ್ಡಿದ್ದರೂ ಮಂಜುಳಾ ಅವರಿಗೆ ಶಾಲೆ ಕಲಿಯಬೇಕೆಂಬ ಅದಮ್ಯ ಬಯಕೆ. 8ನೇ ತರಗತಿವರೆಗೆ ಓದಿ ನಂತರ ಶಾಲೆ ಬಿಟ್ಟು ಕೂಲಿ ಮಾಡುತ್ತಿದ್ದ ಮಂಜುಳಾ ಒಂದು ದಿನ ರಾಷ್ಟ್ರಪತಿಗಳಿಂದ ನಾರಿಶಕ್ತಿ ಪ್ರಶಸ್ತಿ ಪುರಸ್ಕೃತ ದೇವದಾಸಿ ಮಹಿಳೆ ಶೋಭಾ ಗಸ್ತಿ ಅವರ ಕಣ್ಣಿಗೆ ಬಿದ್ದರು.

ಅವರಿಂದ ಬಂದ, ‘ನಿನ್ನಲ್ಲಿ ಛಲವಿದೆ ಸಾಧಿಸು’ ಎಂಬ ಮಾತು ಮಂಜುಳಾಗೆ ಪ್ರೇರಣೆಯಾಯಿತು. ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯನ್ನು ದೂರ ಶಿಕ್ಷಣದ ಮೂಲಕ ಪಾಸಾದರು. 17ನೇ ವಯಸ್ಸಿನಲ್ಲಿ ಸಂಸ್ಥೆಯೊಂದರಲ್ಲಿ ಕೆಲಸಕ್ಕೂ ಸೇರಿಕೊಂಡರು. ಸಾಮಾಜಿಕ ಪರಿವರ್ತನಾ ಜನಾಂದೋಲನದಲ್ಲಿ ತೊಡಗಿಸಿಕೊಂಡು ಬಾಲ್ಯವಿವಾಹ ತಡೆಗೆ ಮುಂದಾದರು.

ಬಾಲ್ಯವಿವಾಹ ನಿಷೇಧ ಕಾಯ್ದೆ, ಬಾಲ್ಯವಿವಾಹದಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳನ್ನು ತನ್ನದೇ ಉದಾಹರಣೆ ಮೂಲಕ ಬಾಲ್ಯವಿವಾಹ ಮಾಡಲು ಮುಂದಾಗುವ ಮಕ್ಕಳ ತಂದೆ ತಾಯಿ, ಸೋದರಮಾವ ಸೇರಿದಂತೆ ಅವರ ಸಂಬಂಧಿಕರ ಮನಸ್ಸನ್ನು ಬೆಣ್ಣೆಯೊಳಗಿನ ಕೂದಲು ತೆಗೆದಷ್ಟು ಸುಲಭವಾಗಿ ಪರಿವರ್ತಿಸುವ ಛಾತಿ ಇವರಲ್ಲಿತ್ತು. ಇದುವರೆಗೆ 200ಕ್ಕೂ ಹೆಚ್ಚು ಬಾಲ್ಯವಿವಾಹ ತಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

34 ವರ್ಷದ ಮಂಜುಳಾ ಮಾದರ ಪ್ರೋತ್ಸಾಹದಿಂದ ಕುಂಗಟೋಳಿಯ ರಾಧಿಕಾ ಮಾದರ, ಬೆಣ್ಣಿಹಳ್ಳಿಯ ಐಶ್ವರ್ಯಾ ಗವನಾಳೆ ಕಾನೂನು ಪದವಿ ಓದುತ್ತಿದ್ದಾರೆ. ಅರಬಾಂವಿಯ ಮೇಘನಾ ಮಾದರ ದ್ವಿತೀಯ ಪಿಯುಸಿ ಪೂರ್ಣಗೊಳಿಸಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಬಾಲ್ಯವಿವಾಹದಿಂದ ಬಾಡಿ ಹೋಗುತ್ತಿದ್ದ ಇವರಂತಹ ನೂರಾರು ಬಾಲಕ ಬಾಲಕಿಯರ ಬದುಕು ಉಜ್ವಲಗೊಳ್ಳಲು ಕಾರಣವೇ ಮಂಜುಳಾ ಮಾದರ ದಿಟ್ಟ ನಿಲುವು.

—ಚಂದ್ರಶೇಖರ ಎಸ್. ಚಿನಕೇಕರ, ಚಿಕ್ಕೋಡಿ

# ಪರರಿಗೆ ಹೊರೆಯಾಗದ ಬದುಕು

ನಮ್ಮ ಮನೆಯ ಸಮೀಪದ ಮುಖ್ಯರಸ್ತೆಯ ಬದಿಯಲ್ಲಿ ಸುಮಾರು 70 ವಯಸ್ಸಿನ ದಂಪತಿಯದು ಹಳಸಿನ ತೊಳೆ ಮಾರಿಯೇ ಬದುಕು. ದೂಡು ಗಾಡಿಯೇ ಜೀವನಾಡಿ. ರಾತ್ರಿ ವೇಳೆ ಕಳ್ಳರ ಭಯದಿಂದ ಅದನ್ನು ಸರಪಳಿ ಕಟ್ಟಿ ವಿದ್ಯುತ್ ಕಂಬಕ್ಕೆ ಬಿಗಿಯುವುದು ಅವರ ನಿತ್ಯದ ದಿನಚರಿ. ಅವರನ್ನು ನಾನು ವ್ಯಾಪಾರ ಹೇಗೆ, ಲಾಭವೆ, ನಷ್ಟವೆ ಅಂತ ವಿಚಾರಿಸುವುದು ತಪ್ಪುತ್ತಿರಲಿಲ್ಲ. ಅವರು ಚೊಕ್ಕವಾಗಿ ಹಳಸಿನ ಹಣ್ಣನ್ನು ಕಲಾತ್ಮಕವಾಗಿ ಸೀಳುವ ಕೌಶಲವನ್ನು ಸಿಕ್ಕ ಸಿಕ್ಕ ಗೆಳೆಯರೊಂದಿಗೆ ನಾನು ಹಂಚಿಕೊಳ್ಳುತ್ತಿದ್ದುದು ಅಷ್ಟೇ ಮಾಮೂಲು.

ಏನ್ರಪ್ಪ, ಇದರಲ್ಲಿ ಜೀವನ ಸಾಗುತ್ತ? ಅಂದಾಗಲೆಲ್ಲ ದಂಪತಿ ಮೇಲೆ ದಿಟ್ಟಿಸಿ, ‘ಎಲ್ಲಾ ದೇವರ ದಯೆ’ ಅನ್ನುವರು. ‘ಮಳೆಯೋ, ಬಿಸಿಲೋ ದಿನಕ್ಕೆ ನಾಲ್ಕು ಹಣ್ಣು ಕೊಯ್ದರೆ ಸಾಕು, ಮಕ್ಕಳು ಉದ್ಯೋಗ ಹಿಡಿತಿದಾರೆ ಹೇಗೂ’ ಎನ್ನುವರು. ಅಲ್ಲ, ನಮಗೆ ಹೇಳಿಕೊಟ್ಟರೂ ಇಂಥ ಧೈರ್ಯ, ಆತ್ಮವಿಶ್ವಾಸ ಬಾರದಲ್ಲ.


‘ವಿನಾಕಾರಣ ತೊಳೆಯ ರೇಟು ಜಾಸ್ತಿ ಮಾಡಕಿಲ್ಲ ಸಾಮಿ, ಹಣ್ಣು ಸಪ್ಪೆ, ಇಲ್ಲಾಂದ್ರೆ ವಸಿ ಕಷ್ಟಾನೆ. ಗಿರಾಕಿಗಳೆ ಅಡ್ಜೆಸ್ಟ್ ಮಾಡ್ಕೊತಾರೆ, ಜಾಸ್ತಿ ಅಂದ್ರು ವ್ಯಾಪಾರ ಒಲ್ಲೆ ಅನ್ನಕಿಲ್ಲ’ ಎಂದು ಹೇಳುವರು.

ನಾನು ಒಂದು ತಿಂಗಳ ಕಾಲ ವಿದೇಶಕ್ಕೆ ಹೋಗಿದ್ದೆ. ವಾಪಸ್ಸು ಬಂದ ಮರುದಿನ ಬೆಳಿಗ್ಗೆಯೇ ಗಾಡಿಯ ಬಳಿ ಹೋದೆ. ಅರೆ! ಆ ಅಜ್ಜ ಇಲ್ಲ, ಅಜ್ಜಿಯೊಬ್ಬರೆ ತೊಳೆಗಳನ್ನು ಗಾಜಿನ ಜಾಡಿಗೆ ಹಾಕುತ್ತಿದ್ದರು. ಅಯ್ಯೋ... ನನ್ನ ಕೆಟ್ಟ ಊಹೆ ಸುಳ್ಳಾಗಲಿ ಅಂದುಕೊಂಡೆ. ಆದರೆ ಆಕೆ ಪೆಚ್ಚಿನಿಂದ ‘ಸಾಮಿ ಒಂದು ವಾರವಾಯ್ತು, ಜಾಂಡಿಸಾಗಿತ್ತು’ ಅಂದರು. ಮಾತನಾಡಲಾಗದೆ ಮೌನಿಯಾದೆ. ಗಾಡಿಯ ಮಗ್ಗುಲಿನಲ್ಲಿ ಸ್ಕೂಟರ್ ಇತ್ತು. ಹೌದು, ಅದೇ ಹಳೆಯ, ಅಜ್ಜ ಓಡಿಸುತ್ತಿದ್ದ ರಥ. ನಾನು ವಿಚಾರಿಸುವ ಮುನ್ನವೇ ಆಕೆ, ‘ನಾನೇ ಓಡಿಸ್ತೀನಿ... ಮಾರುಕಟ್ಟೆಯಿಂದ ಹಣ್ಣು ತರೋಕೆ ಬೇಕಲ್ಲ ಅಣ್ಣಾವರೆ’ ಅಂದರು. ಪರರಿಗೆ ಹೊರೆಯಾಗದೆ ಎಂಥದ್ದೇ ಸಂದರ್ಭದಲ್ಲೂ ಬದುಕುವುದೂ ಒಂದು ಸಾಧನೆ ಅಲ್ಲವೆ?

—ಬಿಂಡಿಗನವಿಲೆ ಭಗವಾನ್



## ಮೂರ್ಖರಾದ ಆ ದಿನ!



ಮೂರ್ಖರಾಗುವ ಪ್ರಸಂಗ ಎಲ್ಲರ ಜೀವನದಲ್ಲಿ ಒಮ್ಮೆಯಾದರೂ ನಡೆದೇ ಇರುತ್ತದೆ. ಏನೇ ಜಾಣತನದಿಂದಿದ್ದರೂ ನಾವೆಷ್ಟೇ ಚಾಲಾಕಿ ಎಂದುಕೊಂಡಿದ್ದರೂ ಗೊತ್ತೋ ಗೊತ್ತಿಲ್ಲದೆಯೋ ಬೇಸ್ತು ಬೀಳುವ ಸಂಗತಿಯಂತೂ ಸಂಭವಿಸಿಯೇ ಇರುತ್ತದೆ. ಅದು ಆ ಕ್ಷಣಕ್ಕೆ ಮುಜುಗರ, ಬೇಸರ, ಕೋಪ ತರಿಸಿದ್ದರೂ ಕಾಲ ಕಳೆದಂತೆ ಒಂದು ನೆನಪಾಗಿ, ಮನದಲ್ಲಿ ನಗು ಮೂಡಿಸುತ್ತದೆ. ಅಂಥ ಸ್ವಾರಸ್ಯಕರ ಪ್ರಸಂಗ ನಿಮ್ಮ ಜೀವನದಲ್ಲಿಯೂ ನಡೆದಿದೆಯೇ? ನೀವು ಮೂರ್ಖರಾದ ಆ ಸಂಗತಿ ಯಾವುದು? ನಿಮ್ಮ ಅನುಭವವನ್ನು ‘ಸುಧಾ’ದೊಂದಿಗೆ ಹಂಚಿಕೊಳ್ಳಬಹುದು. ಬರಹ ನುಡಿ ಅಥವಾ ಯುನಿಕೋಡ್‌ನಲ್ಲಿ 150 ಪದಮಿತಿಯಲ್ಲಿರಲಿ. ಕೊನೆಯ ದಿನಾಂಕ ಏಪ್ರಿಲ್ 30. ಬರಹ ಕಳುಹಿಸಬೇಕಾದ ವಿಳಾಸ: editorsu@sudha.co.in